# ಎಚ್ ಐ ವಿ ಏಡ್ಸ್ – ಸಾಮಾನ್ಯ ಪ್ರಶ್ನೆಗಳು ಮತ್ತು ಅವುಗಳಿಗೆ ಉತ್ತರ

1. **ಎಚ್ ಐ ವಿ ಏಡ್ಸ್ ಎಂದರೇನು?**
   - ಎಚ್ ಐ ವಿ ಎಂದರೆ ಹ್ಯೂಮ ಇಮ್ಮುನೋ ಡಿಫಿಶಿಯನ್ಸಿ ವೈರಸ್ ( ಮನುಷ್ಯನ ದೇಹದಲ್ಲಿ ಮಾತ್ರ ಕಂಡು ಬರುವ ಹಾಗೂ ದೇಹದ ರೋಗ ಪ್ರತಿರೋದ ಶಕ್ತಿಯನ್ನು ಕುಂದಿಸುವ ಒಂದು ವೈರಸ್)
   - ಏಡ್ಸ್ ಎಂದರೆ ಅಕ್ವಾಯ್ರ್ಡ್ ಇಮ್ಮುನೋ ಡಿಫಿಷಿಯನ್ಸಿ ಸಿಂಡ್ರೋಂ ( ಹಲವು ರೋಗ ಲಕ್ಷಣಗಳ ಕೂಟ).

2. **ಪ್ರತಿರೋಧ ಶಕ್ತಿ ಎಂದರೇನು?**

   ದೇಹದ ರಕ್ತದಲ್ಲಿರುವ ಬಿಳಿ ರಕ್ತ ಕಣಗಳು ದೇಹದೊಳಕ್ಕೆ ಬರುವ ಯಾವುದೇ ವೈರಸ್, ಬ್ಯಾಕ್ಟೀರಿಯ ಮುಂತಾದ ರೋಗಾಣುಗಳನ್ನು ನಮ್ಮ ದೇಹವನ್ನು ಪ್ರವೇಶಿಸಿ ಯಾವುದೇ ಹಾನಿಯನ್ನು ಮಾಡದಂತೆ ತಡೆಯುತ್ತದೆ ಆದುದರಿಂದ ನಮಗೆ ಯಾವುದೇ ರೀತಿಯ ರೋಗಗಳು ಬರದಂತೆ ತಡೆಯವ ಕೆಲಸವನ್ನು ಈ ಬಿಳಿ ರಕ್ತ ಕಣಗಳು ಮಾಡುತ್ತದೆ. ಇದಕ್ಕೆ ರೋಗ ಪ್ರತಿರೋಧ ಶಕ್ತಿ ಎನ್ನುತ್ತೇವೆ.

3. **ಎಚ್ ಐ ವಿ ಹರಡಲು ಮುಖ್ಯ ಕಾರಣಗಳೇನು?**
   - ಸೋಂಕು ತಗಲಿದ ವ್ಯಕ್ತಿಗಳೊಡನೆ ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ
   - ಒಬ್ಬರು ಉಪಯೋಗಿಸಿದ ಸೋಂಕಿತ ಸೂಜಿ ಸಿರಿಂಜುಗಳನ್ನು ಇನ್ನೊಬ್ಬರು ಉಪಯೋಗಿಸುವುದರಿಂದ
   - ಸೋಂಕು ತಗುಲಿದ ಹೆತ್ತವರಿಂದ ಹುಟ್ಟುವ ಮಗುವಿಗೆ
   - ಸೋಂಕಿತ/ ಪರೀಕ್ಷೆ ಮಾಡದ ರಕ್ತವನ್ನು ಪಡೆದು ಕೊಳ್ಳುವುದರಿಂದ.

4. **ಎಚ್ ಐ ವಿ/ಏಡ್ಸ್ ಹೇಗೆ ಹರಡುವುದಿಲ್ಲ?**
   - ಸ್ಪರ್ಶಿಸುವುದ'ರಿಂದ, ಕೈ ಕುಲುಕುವುದರಿಂದ, ಆಲಿಂಗಿಸಿ ಕೊಳ್ಳುವುದರಿಂದ
   - ಒಟ್ಟಿಗೆ ನದಿ ಕೊಳಗಳಲ್ಲಿ ಸ್ನಾನ ಮಾಡುವುದರಿಂದ
   - ಸೊಳ್ಳೆ ಕಚ್ಚುವುದರಿಂದ
   - ಒಬ್ಬರ ಬಟ್ಟೆ ಇನ್ನೊಬ್ಬರು ತೊಡುವುದರಿಂದ
   - ಒಂದೇ ತಟ್ಟೆಯಲ್ಲಿ ತಿನ್ನುವುದರಿಂದ ಅಥವಾ ಒಂದೇ ಲೋಟದಲ್ಲಿ ಕುಡಿಯುವುದರಿಂದ
   - ಒಂದೇ ಶೌಚಾಲಯ ಬಳಕೆ ಮಾಡುವುದರಿಂದ
   - ರಕ್ತದಾನ ಮಾಡುವುದರಿಂದ
   - ಜೊತೆ0ಯಲ್ಲಿ ವಾಸ ಮಾಡುವುದರಿಂದ
   - ಎಚ್.ಐ.ವಿ/ಏಡ್ಸ್ ಇರುವ ವ್ಯಕ್ತಿಯ ಆರೈಕೆ ಮಾಡುವುದರಿಂದ .

5. **ಎಚ್ ಐ ವಿ ಅಥವಾ ಏಡ್ಸ್ ಸೋಂಕಿನ ಸಾಮಾನ್ಯ ಲಕ್ಷಣಗಳೇನು?**
   - ಒಂದು ತಿಂಗಳಿಗಿಂತ ಹೆಚ್ಚು ಕಾಲ ಜ್ವರ ಬಿಟ್ಟು ಬಿಟ್ಟು ಬರುವುದು
   - ದೀರ್ಗಾವಧಿಯ ಭೇದಿ ಆಗುವುದು
   - ಒಂದೇ ಸಮನೆ ಎಡ ಬಿಡದೇ ಬರುವ ಕೆಮ್ಮು, ಬಾಯಿ, ಕೊರಳು ಮತ್ತು ಗಂಟಲಿನಲ್ಲಿ ಹುಣ್ಣು
   - ಯಾವುದೇ ಕಾರಣವಿಲ್ಲದೇ ದೇಹದ ತೂಕ ಕಡಿಮೆ ಆಗುವುದು.

**6. ದೇಹದ ಯಾವ ದ್ರವಗಳಲ್ಲಿ ಎಚ್ ಐ ವಿ ವರಸ್ ಗಳು ಹೆಚ್ಚಾಗಿರುತ್ತದೆ?**

- ರಕ್ತ
- ವೀರ್ಯ
- ಯೋನಿ ಸ್ರಾವ
- ಎದೆಹಾಲು

"ವೈರಾಣುವಿನ ಗುಣಮಟ್ಟ ಮತ್ತು ಪ್ರಮಾಣದ ಮೇಲೆ ಸೋಂಕು ಹರಡುವಿಕೆ ಅವಲಂಬಿಸುತ್ತದೆ".

**7. ಎಚ್ ಐ ಸೋಂಕಿರುವ ವ್ಯಕ್ತಿಯನ್ನು ಮನೆಯಲ್ಲಿ ಇಟ್ಟುಕೊಳ್ಳ ಬಹುದೇ?**

ಎಚ್ ಐ ವಿ ಸೋಂಕುಳ್ಳ ವ್ಯಕ್ತಿಯನ್ನು ಮನೆಯಲ್ಲಿಯೇ ಇರಿಸಿ ಅವರಿಗೆ ಅಗತ್ಯವಿರುವ ಚಿಕಿತ್ಸೆಯನ್ನು ಕೊಡಿಸುವುದು ಬಹಳ ಉತ್ತಮ. ಏಕೆಂದರೆ ಅವರಿಗೆ ಔಷಧ ಉಪಚಾರಗಳ ಜೊತೆಗೆ ಅವರಿಗೆ ಮಾನಸಿಕ ಬೆಂಬಲ, ಆತ್ಮ ವಿಶ್ವಾಸ, ಬದುಕಿನೆಡೆಗೆ ಸಕಾರಾತ್ಮಕ ಚಿಂತನೆಗಳ ಅಗತ್ಯವಿದೆ. ಇದು ಆ ವ್ಯಕ್ತಿಯ ಮನೆಯವರಿಂದ ಮಾತ್ರ ನೀಡಲು ಸಾಧ್ಯ. ಇದರಿಂದ ಸೋಂಕಿತ ವ್ಯಕ್ತಿಯು ಬಹಳಷ್ಟು ವರ್ಷ ಆರೋಗ್ಯ ವಂತನಾಗಿ ಬದುಕ ಬಹುದು. ಅವರನ್ನು ಪ್ರೀತಿ ವಿಶ್ವಾಸದಿಂದ ಕಾಣುವುದು ಅವ್ರ ಜೀವಿಟವಧಿಯನ್ನು ಹೆಚ್ಚಿಸುತ್ತದೆ.

**8. ಎಚ್ ಐ ವಿ ವರಾಣು ಮನುಷ್ಯನ್ ದೇಹದಿಂದ ಹೊರ ಬಂದಾಗ ಎಷ್ಟು ಹೊತ್ತು ಬದುಕಿರುತ್ತೆ?**

ಸಾಮಾನ್ಯವಾಗಿ ಎಚ್ ಐ ವಿ ವೈರಸ್ ಮನುಷ್ಯನ ದೇಹದಿಂದ ಹೊರ ಬಂದು ಹೊರಗಿನ ವಾತಾವರಣದಲ್ಲಿ 40 ರಿಂದ 50 ಸೆಕೆಂಡ್ ಗಳ ವರೆಗೆ ಬದುಕಿರುತ್ತವೆ. ಹೊರಗಿನ ತಾಪಮಾನದಲ್ಲಿ ವೈರಸ್ ಬಹಳ ಕಾಲ ಬದುಕುವುದು ಸಾದ್ಯವಿಲ್ಲ. ಸಾಧಾರಣವಾಗಿ ವೈರಸ್ ಹೊಂದಿದ ಮನುಷ್ಯನ ರಕ್ತ ಅಥವ ಇತರ ದ್ರವಗಳು ಹೆಪ್ಪು ಗಟ್ಟುವ/ ಒಣಗುವ ವರೆಗೆ ವೈರಸ್ ಬದುಕುವ ಸಾದ್ಯತೆಗಳಿವೆ.

**9. ಕಾಂಡೋಂ ಬಳಸಿದರೂ ಏಡ್ಸ್ ಬರುವ ಸಾದ್ಯತೆಗಳಿವೆಯೇ?**

ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಏಡ್ಸ್ ಬರುವುದನ್ನು ತಡೆಗಟ್ಟಲು ಇರುವ ಒಂದು ವಿಧಾನವೆಂದರೆ ಕಾಂಡೋಂ ಬಳಕೆ. ಸರಿಯಾದ ರೀತಿಯಲ್ಲಿ ಕಾಂಡೋಂನ್ನು ಬಳಸಿದರೆ ಏಡ್ಸ್ ಸೋಂಕು ಬರುವುದಿಲ್ಲ. ಆದರೆ ಕಾಂಡೋಂ ಒಂದು ವೇಳೆ ಕಾಲಾವಧಿ ಮೀರಿದ್ದಾಗಿದ್ದಲ್ಲಿ ಅದು ಲೈಂಗಿಕ ಸಂಪರ್ಕದ ವೇಳೆಯಲ್ಲಿ ಒಡೆದು ಹೋಗುವ ಸಂಭವವಿದ್ದು ಆ ರೀತಿ ಆಗಿದ್ದಲ್ಲಿ ಎಚ್ ಐ ವಿ ವೈರಸ್ ನಮ್ಮ ದೇಹವನ್ನು ಸೇರಿ ಕೊಳ್ಳುವ ಸಂಭವವಿದೆ.

**10. ಎಚ್ ಐ ವಿ /ಆಡ್ಸ್ ಕುರಿತು ಆರೋಗ್ಯ ಇಲಾಖೆ ಮತ್ತು ಗ್ರಾಮ ಪಂಚಾಯತಿಗಳು ಯಾವ ರೀತಿ ಕಾರ್ಯಕ್ರಮಗಳಾನ್ನು ರೂಪಿಸಿ ಕೊಳ್ಳ ಬಹುದಾಗಿದೆ?**

ಆರೋಗ್ಯ ಇಲಾಖೆಯ ವತಿಯಿಂದ ಹಲವಾರು ಕಾರ್ಯಕ್ರಮಗಳು ಈಗಾಗಲೇ ಜಾರಿಯಲ್ಲಿದೆ. ಎಲ್ಲಾ ಜಿಲ್ಲಾ ಆಸ್ಪತ್ರೆಗಳು, ತಾಲೂಕು ಆಸ್ಪತ್ರೆಗಳು, ಸಮುದಾಯ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಚ್ ಐ ವಿ ಏಡ್ಸ್ ಕುರಿತಂತೆ ಎಲ್ಲಾ ಮಾಹಿತಿ, ರಕ್ತ ಪರೀಕ್ಷೆ, ಅವಕಾಶವಾದಿ ಸೋಂಕುಗಳ ಚಿಕಿತ್ಸೆ, ಏಆರ್‌ಟಿ ಚಿಕಿತ್ಸೆ ಉಚಿತವಾಗಿ ಲಭ್ಯವಿದೆ. ಆರೋಗ್ಯ ಕಾರ್ಯಕರ್ತರು ಗ್ರಾಮ ಮಟ್ಟದಲ್ಲಿ ವಿವಿಧ ಸಮುದಾಯಗಳಿಗೆ ತಿಳುವಳಿಕೆ ನೀಡುವ ಕಾರ್ಯಗಳನ್ನು ಮಾಡುವಂತೆ ತರಬೇತಿ ನೀಡಲಾಗಿದೆ. ಗ್ರಾಮ ಪಂಚಾಯತಿಗಳು ತಮ್ಮ ಗ್ರಾಮ ವ್ಯಾಪ್ತಿಯಲ್ಲಿ ತಿಳುವಳಿಕಾ ಕಾರ್ಯಕ್ರಮಗಳನ್ನು ಆಯೋಜಿಸಿ ಗ್ರಾಮದ ಪುರುಷರು, ಮಹಿಳೆಯರು, ಯುವ ಜನರನ್ನು ಒಗ್ಗೂಡಿಸಿ ನಿಯಮಿತವಾಗಿ ಎಚ್ ಐ ಮತ್ತು ಏಡ್ಸ್ ಕುರಿತಾಗಿ ತರಬೇತಿ, ಮಾಹಿತಿ ಮತ್ತು ಸಂವಾದಗಳನ್ನು ಆಯೋಜಿಸ ಬಹುದಾಗಿದೆ. ಜೊತೆಗೆ ಈಗಾಗಲೇ ಎಚ್ ಐ ವಿ ಸೋಂಕು ತಗಲಿದವರಿಗೆ ಮಾನಸಿಕ ಬೆಂಬಲವನ್ನು ನೀಡಿ ಅವರು ಸಾಮಾನ್ಯ ಬದುಕನ್ನು ನಡೆಸುವಲ್ಲಿ ಅಗತ್ಯವಿರುವ ಸವಲತ್ತುಗಳನ್ನು ಪಂಚಾಯತಿಯಿಂದ ನೀಡ ಬಹುದಾಗಿದೆ. ಗ್ರಾಮದಲ್ಲಿರುವ ಎಚ್ ಐ ವಿ ಸೋಂಕಿತ ಅಥವಾ ಭಾದಿತ ಮಕ್ಕಳಿಗೆ ಅಗತ್ಯವಿರುವ ರಕ್ಷಣೆ, ಶಿಕ್ಷಣ ಮತ್ತು ಪಾಲನೆ ಮಾಡುವಲ್ಲಿ ಪಂಚಾಯತಿಯ ಪಾತ್ರ ಹಿರಿದಾಗಿದೆ. ಗ್ರಾಮೀಣ ನೈರ್ಮಲ್ಯ ಸಮಿತಿಯ ಕಾರ್ಯ ಕ್ರಮಗಳಲ್ಲಿ ಎಚ್ ಐ

ವಿ ತಡೆ ಕಾರ್ಯಕ್ರಮವನ್ನೂ ಒಳ ಪಡಿಸುವುದರ ಮೂಲಕ ತಮ್ಮ ಗ್ರಾಮವನ್ನು ಎಚ್ ಐ ವಿ ಮುಕ್ತ ಗ್ರಾಮವನ್ನಾಗಿ ಮಾಡ ಬಹುದಾಗಿದೆ.

**11. ಎಚ್ ಐ ವಿ ಗೆ ಔಷಧೋಪಾಚಾರವಿದೆಯೇ?**

ಎಚ್ ಐ ವಿ ವೈರಸ್ ಒಮ್ಮೆ ಮನುಷ್ಯನ ದೇಹವನ್ನು ಪ್ರವೇಶಿಸಿದ ಮೇಲೆ ಅದನ್ನು ದೇಹದಿಂದ ಹೊರ ಹಾಕುವ ಯಾವುದೇ ಔಷದಗಳನ್ನು ಈ ವರೆಗೆ ಕಂಡು ಹಿಡಿಯಲಾಗಿಲ್ಲ. ಆದರೆ ವೈರಸ್ ನ ಸಂಖ್ಯೆಯನ್ನು ಹತೋಟಿಯಲ್ಲಿಟ್ಟು, ಅವುಗಳಿಂದ ನಮ್ಮ ದೇಹಕ್ಕೆ ಯಾವುದೇ ರೀತಿಯ ಇನ್ನಿತರ ಕಾಯಿಲೆಗಳು ಬರದ ರೀತಿಯಲ್ಲಿ ಕಾಪಾಡುವ ಔಷಧಗಳು ಈಗ ಲಭ್ಯವಿದೆ. ಈ ಔಷಧಿಗಳನ್ನು ಓರ್ವ ನುರಿತ ವೈದ್ಯರ ಸಲಹೆ ಮೇರೆಗೆ ನಿಯಮಿತವಾಗಿ ತೆಗೆದು ಕೊಳ್ಳುವುದರಿಂದ ನಾವು ಎಚ್ ಐ ವಿ ಸೋಂಕಿನಿಂದಾಗಿ ಏಡ್ಸ್ ಹಂತವನ್ನು ತಲುಪುವುದನ್ನು ತಡೆಯ ಬಹುದು. ಈ ಔಷಧಿಗಳು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿರುವ ಎ ಆರ್ ಟಿ ಕೇಂದ್ರಗಳಲ್ಲಿ ಉಚಿತವಾಗಿ ಲಭ್ಯವಿದೆ. ಈ ಔಷಧಿಗಳು ಮೊದಲಿಗೆ ನಮ್ಮ ದೇಹದಲ್ಲಿ ಕೆಲವು ಅಡ್ಡ ಪರಿಣಾಮಗಳು ಉಂಟಾಗುವುದಾದರೂ ನಿಯಮಿತ ಬಳಕೆಯಿಂದ ಹಾಗೂ ವೈದ್ಯರ ಸೂಕ್ತ ಸಲಹೆ ಮತ್ತು ಆರೈಕೆಯಿಂದ ಈ ಅಡ್ಡ ಪರಿಣಾಮಗಳನ್ನು ನಿವಾರಿಸ ಬಹುದಾಗಿದೆ.

**12. ಎಚ್ ಐ ವಿ ಸೋಂಕು ತಗಲಿದ ವ್ಯಕ್ತಿಗೆ ಎಷ್ಟು ತಿಂಗಳ ಒಳಗೆ ಏಡ್ಸ್ ಆಗುತ್ತದೆ?**

ಇದು ಆಯಾ ವ್ಯಕ್ತಿಯ ರೋಗ ನಿರೋಧಕ ಶಕ್ತಿಯನ್ನು ಅವಲಂಬಿತವಾಗಿರುತ್ತದೆ. ಸಾಮಾನ್ಯವಾಗಿ ಎಚ್ ಐ ವಿ ಸೋಂಕಿತ ವ್ಯಕ್ತಿಯು ತನಗೆ ಸೋಂಕು ಬಂದಿದೆ ಎಂದು ತಿಳಿಯದೇ ಏನೂ ಆರೋಗ್ಯ ಕ್ರಮಗಳನ್ನು ಅನುಸರಿಸದೇ ಬದುಕಿದ್ದಲ್ಲಿ ಅವನಿಗೆ ಏಡ್ಸ್ ಹಂತವು ಕೆಲವು ವರ್ಷದ ಒಳಗೆ ಕಾಣಿಸಿಕೊಳ್ಳ ಬಹುದು. ಸಾಮಾನ್ಯವಾಗಿ ಎಚ್ ಐ ವಿ ಯಿಂದ ಏಡ್ಸ್ ಹಂತ'ಕ್ಕೆ ಬರಲು 2 ರಿಂದ 10 ವರ್ಷಗಳು ಬೇಕಾಗುತ್ತದೆ.

**13. ಎಚ್ ಐ ವಿ ಸೋಂಕಿತನ ವೀರ್ಯವು ಒಂದೊಂದು ಸಾರಿ ಮಗುವಿನ ಮೇಲೆ ಏಕೆ ಪರಿಣಾಮ ಬೀರುವುದಿಲ್ಲ?**

ಎಚ್ ಐ ವಿ ಸೋಂಕಿತ ಹೆತ್ತವರಿಂದ ಮಗುವುಗೆ ಮೂರು ಹಂತಗಳಲ್ಲಿ ಬರ ಬಹುದಾಗಿದೆ – 1. ಗರ್ಭಾವಸ್ಥೆಯಲ್ಲಿ, 2. ಹೆರಿಗೆ ಸಂದರ್ಭದಲ್ಲಿ ಮತ್ತು 3. ತಾಯಿಯ ಎದೆ ಹಾಲಿನಿಂದ. ವೀರ್ಯವು ಭ್ರೂಣಾವಸ್ಥೆಯಲ್ಲಿ ಇರುವ ಮಗುವಿಗೆ ಎಚ್ ಐ ವಿ ಸೋಂಕನ್ನು ತಗಲಿಸುವ ಸಾದ್ಯತೆ ತೀರಾ ವಿರಳವಾಗಿರುತ್ತದೆ.

**14. ಏಡ್ಸ್ ಪ್ರಪಂಚದಲ್ಲಿ ಮೊದಲಿಗೆ ಎಲ್ಲಿ ಕಾಣಿಸಿಕೊಂಡಿತು?ಏಡ್ಸ್ ಹೊಂದಿರುವವರು ಎಷ್ಟು ಕಾಲ ಬದುಕುತ್ತಾರೆ?**

ಏಡ್ಸ್ ಪ್ರಪಂಚದಲ್ಲಿ ಮೊದಲ ಬಾರಿಗೆ 1981 ರಲ್ಲಿ ಅಮೇರಿಕಾ ದಲ್ಲಿ ಕಾಣಿಸಿಕೊಂಡಿತು.ಏಡ್ಸ್ ಹೊಂದಿರುವವರು ಕ್ರಮ ಬದ್ದ ಆಹಾರ, ನಿಯಮಿತ ವ್ಯಾಯಾಮ ಮತ್ತು ಸಕಾರಾತ್ಮಕ ಭಾವನೆಗಳನ್ನು ಬೆಳೆಸಿ ಕೊಂಡಲ್ಲಿ ಎಷ್ಟು ವರ್ಷಗಳ ವರೆಗೂ ಬದುಕ ಬಹುದು. ಎಚ್ ಐ ವಿ / ಏಡ್ಸ್ ಹೊಂದಿರುವವರು 20 ರಿಂದ 25 ವರ್ಷಗಳ ವರೆಗೆ ಬದುಕಿದ ನಿದರ್ಶನಗಳಿವೆ.

**15. ಎಚ್ ಐ ವಿ ಸೋಂಕಿರುವವನು ಅವಿವಾಹಿತನಾಗಿದ್ದಲ್ಲಿ ಮದುವೆ ಆಗಬಹುದೇ?ಅವನು ತಂದೆಯಾಗ ಬಹುದಾ?**

ಎಚ್ ಐ ವಿ ಸೋಂಕಿತನಾದವನು ವೈವಾಹಿಕ ಜೀವನ ನಡೆಸ ಬಹುದಾಗಿದೆ. ಆದರೆ ವಿವಾಹ ಆಗುವ ಹುಡುಗುಗೆ ಈ ವಿಚಾರವನ್ನು ಮೊದಲೇ ತಿಳಿಸಿ ಅವಳ ಒಪ್ಪಿಗೆಯೊಂದಿಗೆ ವಿವಾಹ ಆಗಬೇಕಾಗುತ್ತದೆ. ಇಲ್ಲವಾದಲ್ಲಿ ವಂಚನೆ ಆರೋಪವನ್ನು ಹೊರಿಸಿ ಅಂತಹ ವ್ಯಕ್ತಿಯ ವಿರುದ್ದ ಕಾನೂನು ಕ್ರಮವನ್ನು ತೆಗೆದುಕೊಳ್ಳಬಹುದು. ಒಂದು ವೇಳೆ ಪರಸ್ಪರ ಒಪ್ಪಿ ವಿವಾಹ ವಾದಲ್ಲಿ ಆಪ್ತ ಸಮಾಲೋಚಕರ ಸಲಹೆಯನ್ನು ಪಡೆದು ಕೊಂಡು ಮಕ್ಕಳನ್ನು ಪಡೆಯ ಬಹುದು.

**16. ಎಚ್ ಐ ಬಂದವರನ್ನು ಗೌಪ್ಯವಾಗಿ ಇಡಲು ಕಾರಣವೇನು?**

ಎಚ್ ಐ ವಿ/ ಏಡ್ಸ್ ಬಗ್ಗೆ ಸಂಬಂದಿಸಿದಂತೆ ಸಮಾಜದಲ್ಲಿ ಇರುವ ಕಳಂಕ ಹಾಗೂ ತಾರತಮ್ಯದಿಂದಾಗಿ ಎಚ್ ಐ ವಿ ಯೊಂದಿಗೆ ಬದುಕುತ್ತಿರುವ ವ್ಯಕ್ತಿಯು ತನ್ನ ಬದುಕಿನಲ್ಲಿ ವಿವಿಧ ರೀತಿಯ ಅವಮಾನ, ತಾರತ್ಮ್ಯ, ಅನಾದರಣೆ ಮಾನಸಿಕ ಹಿಂಸೆ ಹಾಗೂ ಎಚ್ ಐ ವಿ ಸೋಂಕು ಇಲ್ಲದಿರುವ ಕುಟುಂಬದ ಇತರ ಸದಸ್ಯರೂ ಸಮಾಜಿಕ

ಅವಗಣನೆಗೆ ಬಲಿಯಾಗುವ ಸಂದರ್ಭಗಳು ಹೆಚ್ಚಾಗುತ್ತಿರುವ ಕಾರಣದಿಂದಾಗಿ ಸೋಂಕಿನ ವಿಷಯವನ್ನು ಗೌಪ್ಯವಾಗಿ ಇಡುವಂತಹ ಪರಿಸ್ತಿತಿ ನಿರ್ಮಾಣವಾಗಿದೆ.

ಆದುದರಿಂದ ಎಚ್ ಐ ಮಿ /ಏಡ್ಸ್ ಬಗ್ಗೆ ಜನರಲ್ಲಿ ಇರುವ ತಪ್ಪು ಕಲ್ಪನೆಗಳನ್ನು ದೂರ ಮಾಡುವ ಮಹತ್ತರವಾದ ಜವಾಬ್ದಾರಿ ನಮ್ಮದಾಗಿದೆ. ಕಳಂಕ ತಾರತಮ್ಯ ರಹಿತವಾದ ಸನ್ನಿವೇಶ ನಿರ್ಮಾಣವಾದಲ್ಲಿ ಎಚ್ ವಿ ಸೋಂಕಿತರು ತಾವಾಗಿಯೇ ಮುಂದೆ ಬಂದು ತಮ್ಮ ಸ್ತಿತಿಯನ್ನು ವಿವರಿಸಿ ಅಗತ್ಯವಿರುವ ಸೇವೆಬಳನ್ನು ಪಡೆದು ಕೊಳ್ಳಲು ಸಾದ್ಯವಾಗುತ್ತದೆ. ಅಲ್ಲದೇ ಸೋಂಕಿತರು ಮತ್ತು ಅವರ ಕುಟುಂಬದ ಸದಸ್ಯರು ಎಲ್ಲರಂತೆಯೇ ಬದುಕಲು ಸಾದ್ಯವಾಗುವುದು.

17. **ಎಚ್ ಐ ಸೋಂಕಿತರು ಮರಣಾನಂತರ ತಮ್ಮ ಅಂಗಾಂಗಳನ್ನು ದಾನ ಮಾಡ ಬಹುದೇ?**

ದಾನ ಮಾಡುವಂತಿಲ್ಲ. ಏಕೆಂದರೆ ದಾನ ಮಾಡುವ ಎಚ್ ಐ ವಿ ಸೋಂಕಿತ ವ್ಯಕಿಯ ರಕ್ತವು ದೇಹದ ಎಲ್ಲಾ ಅಂಗಾಂಗಳಲ್ಲಿ ಇರುವುದರಿಂದ ಅಂಗಾಂಗ ಗಳನ್ನು ಪಡೆದು ಕೊಳ್ಳುವ ವ್ಯಕ್ತಿಗೆ ಕೂಡ ಎಚ್ ಐ ವಿ ಸೋಂಕು ತಗಲುತ್ತದೆ.

18. **ಎಚ್ ಐ ವಿ ಪರೀಕ್ಷೆಯನ್ನು ಮದುವೆಗೆ ಮುನ್ನ ಕಡ್ಡಾಯ ಮಾಡುವುದರಿಂದ ಎಚ್ ಐ ವಿ ಸೋಂಕನ್ನು ತಡೆಗಟ್ಟ ಬಹುದಲ್ಲವೇ?**

ಸಾದ್ಯವಿಲ್ಲ. ಏಕೆಂದರೆ, ಮದುವೆಗೆ ಮುಂಚೆ ಎಚ್ ಐ ವಿ ತಪಾಸಣೆಯಲ್ಲಿ ವ್ಯಕ್ತಿಯು ಸೋಂಕು ರಹಿತನಾಗಿದ್ದರೂ ಮದುವೆಯ ನಂತರವೂ ಕೂಡಾ ಆ ವ್ಯಕ್ತಿಯ ವರ್ತನೆಯ ಆಧಾರದಲ್ಲಿ ಎಚ್ ಐ ವಿ ತಗಲುವ ಸನ್ನಿವೇಶ ಮುಂದಾಗ ಬಹುದು.

19. **ಶಾಲೆಗಳಲ್ಲಿ ಅಡುಗೆ ಮಾಡುವವರಿಗೆ ಎಚ್ ಐ ವಿ/ಏಡ್ಸ್ ಇದ್ದಲ್ಲಿ ಆಹಾರ ಸೇವಿಸುವ ಮಕ್ಕಳಿಗೆ ಎಚ್ ಐ ಸೋಂಕು ತಗಲುವುದಿಲ್ಲವೇ?**

ಇಲ್ಲ. ಏಕೆಂದರೆ ಎಚ್ ಐ ವಿ ಯು ಅಸುರಕ್ಷಿತ ಲೈಂಗಿಕ ಸಂಪರ್ಕ, ಸಂಸ್ಕರಿಸದೇ ಇರುವ ಸೂಜಿ ಸಿರಿಂಜುಗಳ ಉಪಯೋಗ, ಸೋಂಕಿತ ರಕ್ತ ಪಡೆಯುವುದರಿಂದ ಮತ್ತು ಸೋಂಕಿತ ಹೆತ್ತವರಿಂದ ಮಗುವಿಗೆ, ಈ ನಾಲ್ಕು ವಿಧಾನಗಳಿಂಡ್ಲುದೇ ಬೇರೆ ಯಾವುದೇ ಮಾರ್ಗಗಳಿಂದ ಎಚ್ ಐ ವಿ /ಏಡ್ಸ್ ಹರಡುವುದಿಲ್ಲ.

ಒಂದು ವೇಳೆ ಅಡುಗೆ ತಯಾರಿಸುವ ಸಮಯದಲ್ಲಿ ಸೋಂಕಿತ ರಕ್ತ ಮಿಶ್ರಿತವಾದಲ್ಲಿ ಕೂಡಾ ಎಚ್ ಐ ವಿ ವೈ'ರಾಣು ಹೊರಗಿನ ವಾತಾವರಣ ಮತ್ತು ಬೇಯಿಸಿದ ಆಹಾರದಲ್ಲಿ ಬದುಕುವುದಿಲ್ಲ.

20. **ಹೆರಿಗೆ ಸಂದರ್ಭದಲ್ಲಿ ರಕ್ತ ಸ್ರಾವದಿಂದ ಎಚ್ ಐ ವಿ ಹರಡುತ್ತದೆ ಎಂದು ಹೇಳುತ್ತಾರೆ. ಹೇಗೆ ಎಂದು ತಿಳಿಸುತ್ತೀರಾ?**

ಸೋಂಕಿತ ಗರ್ಭಿಣಿಯ ರಕ್ತದಲ್ಲಿ ಎಚ್ ಐ ವಿ ವರಾಣು ಇರುವುದು ಸರಿಯಷ್ಟೆ. ಈ ರಕ್ತ ಹೆರಿಗೆಯ ಸಂದರ್ಭದಲ್ಲಿ ಮಗುವಿಗೆ ಮತ್ತು ಹೆರಿಗೆಯನ್ನು ನಡೆಸಿದ ಡಾಕ್ತರ್ ಮತ್ತು ದಾದಿಯರ ದೇಹದೊಳಕ್ಕೆ ಯಾವುದಾದರೂ ರೀತಿಯಲ್ಲಿ ಸೇರಿದರೆ ಸೋಂಕು ಆಗುತ್ತದೆ.

21. **ಎಚ್ ಐ ವಿ/ ಏಡ್ಸ್ ಗೆ ಔಷಧಿ ಇದೆಯಾ?**

ಎಚ್ ಐ ವಿ/ ಏಡ್ಸ್ ನ್ನು ಗುಣ ಪಡಿಸಲು ಈ ವರೆಗೆ ಯಾವುದೇ ವೈದ್ಯಕೀಯ ಪದ್ದತಿಯಲ್ಲಿ (ಅಲೋಪತಿ, ಯುನಾನಿ, ಆಯುರ್ವೇದ ಇತ್ಯಾದಿ) ಔಷಧಿಯನ್ನು ಕಂಡು ಹಿಡಿಯಲು ಸಾದ್ಯವಾಗಿಲ್ಲ. ಆದರೆ ಸೋಂಕಿತ ವ್ಯಕ್ತಿಯ ದೇಹದಲ್ಲಿರುವ ಎಚ್ ಐ ವಿ ವೈರಾಣುವಿನ ಸಂಖ್ಯೆಯನ್ನು ನಿಯಂತ್ರಿಸಲು ಸಹಾಯಕವಾಗುವ ಔಷಧಿ (ಎ ಆರ್ ಟಿ) ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿದೆ.
ಕೆಲವು ಜಾಹೀರಾತುಗಳ ಮೂಲಕ ಏಡ್ಸ್ ಗುಣಾ ಪಡಿಸುವ ಔಷಧಿ ಲಭ್ಯವಿದೆ ಎಂದು ಸುಳ್ಳು ಮಾಹಿತಿ ನೀಡಿ ಜನರನ್ನು ವಂಚಿಸುವ ಪ್ರಯತ್ನಗಳು ನಡೆಯುತ್ತಿವೆ ಆದರೆ ಈ ಎಲ್ಲಾ ಜಾಹೀರಾತುಗಳನ್ನು ನಂಬಿ ಮೋಸ ಹೋಗದೆ ಇರುವಂತೆ ಜಾಗ್ರತೆ ವಹಿಸ'ಬೇಕಾಗಿದೆ.

**22. ಎಷ್ಟು ಬಾರಿ ಲೈಂಗಿಕ ಸಂಪರ್ಕ ಮಾದಿದಾಗ ಎಚ್ ಐ ವಿ ಸೋಂಕು ತಗಲುವ ಸಾಧ್ಯತೆ ಇದೆ?**

ಅಸುರಕ್ಷಿತ ಲೈಂಗಿಕ ಸಂಪರ್ಕ ದಿಂದ ಎಚ್ ಐ ವಿ ಹರಡುವ ಸಾಧ್ಯತೆ ಮೊದಲನೆ ಬಾರಿಯೂ ಆಗ ಬಹುದು ಅಥವಾ ಐದನೆ ಬಾರಿ ಅಥವಾ ಹತ್ತನೆ ಬಾರಿಯೂ ಬರ ಬಹುದಾಗಿದೆ. ಇದಕ್ಕೆ ನಿರ್ದಿಷ್ಟವಾಗಿ ಎಷ್ಟನೆಯ ಬಾರಿ ಎಂದು ಹೇಳಲಾಗುವುದಿಲ್ಲ. ಆದುದರಿಂದ ಪ್ರತೀ ಅಸುರಕ್ಷಿತ ಲೈಂಗಿಕ ಸಂಪರ್ಕದಲ್ಲಿಯೂ ನಿರೋಧ್ ಬಳಸುವುದು ಸುರಕ್ಷಿತ.

**23. ಎಚ್ ಐ ವಿ ಸೋಂಕಿತ ದಂಪತಿಗಳಿಂದ ಆರೋಗ್ಯ ವಂತ ಮಗುವನ್ನು ಪಡೆಯಲು ಏನೇನು ಕ್ರಮಗಳನ್ನು ಅನುಸರಿಸಬೇಕು?**

ಸೋಂಕಿತ ಮಹಿಳೆ ಗರ್ಭಿಣಿ ಆದಲ್ಲಿ ಕೆಳಗಿನ ಮೂರು ಕ್ರಮಗಳ ಪಾಲನೆಯಿಂದ ಆರೋಗ್ಯ ವಂತ ಮಗುವನ್ನು ಪಡೆಯ ಬಹುದಾಗಿದೆ

- ಆಕೆಯು ವದ್ಯರ ಸಲಹೆ ಮೇರೆಗೆ ಏ ಆರ್ ಟಿ ಔಷಧಿಯನ್ನು ನಿಯಮಿತವಾಗಿ ಸೇವಿಸುವುದು
- ಹೆರಿಗೆಯ ನೋವು ಕಾಣಿಸಿ ಕೊಂಡ ನಂತರ ವೈದ್ಯರು ಆ ಮಹಿಳೆಗೆ ನೆವರಪಿನ್ ಎಂಬ ಮಾತ್ರೆ ನೀಡುವುದರಿಂದ
- ಮಗು ಹುಟ್ಟಿದ ತಕ್ಷಣವೇ ನೆವರಪಿನ್ ದ್ರಾವಣಷ್ಮು ಮಗುವಿಗೆ ನೀಡುವುದರಿಂದ
- ವೈದ್ಯರ ಮತ್ತು ಆಪ್ತ ಸಮಾಲೋಚಕರ ಸೂಚನೆಯಂತೆ ಮಗುವಿನ ಆಹಾರ ನೀಡುವಿಕೆಯನ್ನೆ ಕ್ರಮೀಕರಿಸುವುದು.

**24. ಎಚ್ ಐ ಸೋಂಕು ಎಲ್ಲಿಂದ ಬಂತು? ಇದು ಜನರಿಗೆ ಹೇಗೆ ತಗುಲಿತು?ಈ ಸೋಂಕು ನಮ್ಮ ದೇಶಕ್ಕೆ ಯಾವ ರೀತಿಯಾಗಿ ಬಂತು?**

ಪ್ರಪ್ರಥಮಾಗಿ ಏಚ್.ಐ.ವಿ ವೈರಾಣು ಅಮೇರಿಕಾ ದೇಶದ ನಾಗರಿಕನಲ್ಲಿ ಆ ದೇಶದಲ್ಲಿ ಕಾಣಿಸಿತು. ಈ ವೈರಾಣು ಆಫ್ರೀಕಾ ರಾಷ್ತ್ರದಲ್ಲಿರುವ ಒಂದು ಪಕಾರದ ಕೋತಿ ಪ್ರಬೇಧದಲ್ಲಿ (ಹಸಿರು ಚಿಂಪಾಂಜಿ) ಕಾಣಿಸಿಕೊಂಡಿತು ಎಂದು ದಾಖಲೆಗಳ ಆಧಾರದ ಮೂಲಕ ತಿಳಿಯಲಾಗುತ್ತದೆ. ಆ ಜಾತಿ ಪ್ರಾಣಿಯಿಂದ ಮಾನವನಿಗೆ ಯಾವ ರೀತಿಯಾಗಿ ಹರಡಿತು ಎನ್ನುವ ಯಾವದೇ ಆಧಾರವಿಲ್ಲ. ಆದರೆ, ಆಫ್ರೀಕಾ ದೇಶದಲ್ಲಿ ಕಾಡುಪ್ರಾಣಿಗಳ ಹಸಿ ಮಾಂಸವನ್ನು ತಿನ್ನುವುದು ಪ್ರಚಲಿತದಲ್ಲಿರುವದರಿಂದ, ಆ ಪ್ರಾಣಿಯ ರಕ್ತದ ಮೂಲಕ ಮಾನವನಿಗೆ ಏಚ್.ಐ.ವಿ ವೈರಾಣು ಹರಡಿರಬಹುದು ಎಂದು ಉಹಿಸಲಾಗುತ್ತ್ತದೆ. ಜಾಗತಿಕಮಟ್ಟದಲ್ಲಿ ನಗರೀಕರಣ, ಔದ್ಯೋಗೀಕರಣ ಮತ್ತು ಪ್ರವಾಸೋಧ್ಯಮದ ವೃದ್ಧಿಯ ಕಾರಣದಿಂದಾಗಿ ಜಗತ್ತಿನ ಜನ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ದೇಶಪರ್ಯಟನ ಆರಂಭವಾದ ಕಾರಣದಿಂದಾಗಿ ಈ ವೈರಾಣು ಒಂದು ದೇಶದಿಂದ–ಇನ್ನೊಂದು ದೇಶಕ್ಕೆ ಹರಡಿತು ಎಂದು ಊಹಿಸಲಾಗಿದೆ.

**25. ಎಚ್ ಐ ವಿ ಪರೀಕ್ಷೆಯನ್ನು ಗ್ರಾಮ್ ಮಟ್ಟದಲ್ಲಿ ಏಕೆ ನಡೆಸಬಾರದು? ಇದರಿಂದಾಗಿ ಕಡು ಬಡವರಿಗೆ ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಹೋಗುವ ವೆಚ್ಚವನ್ನು ಉಳಿಸ ಬಹುದಲ್ಲವೇ?**

ಏಚ್.ಐ.ವಿ ಪರಿಕ್ಷೆಯ ಮುನ್ನ ತಪಾಸಣೆಗೆ ಬರುವ ಪ್ರತಿಯೊಬ್ಬ ವ್ಯಕ್ತಿಗೆ ಸಂಪೂರ್ಣ ಸಂವಹನ ಮತ್ತು ಮಾಹಿತಿ ನೀಡಿ ಒಪ್ಪಿಗೆ ಪಡೆದಮೇಲೆ ಏಚ್.ಐ.ವಿ ಪರಿಕ್ಷೆಮಾಡಲಾಗುವುದು. ಯಾವದೇ ಗ್ರಾಮದ ಅಥವಾ ನಗರದ ವ್ಯಕ್ತಿಯು ಸ್ವಯಂ ಪ್ರೇರಿತದಿಂದ ಈ ಪರಿಕ್ಷೆಗೆ ಬರಬೇಕಾಗುತ್ತದೆ. ಆದರೆ, ಗ್ರಾಮದ ಎಲ್ಲಾ ವ್ಯಕ್ತಿಗಳು ಸಹಜವಾಗಿ ಈ ರೀತಿಯ ಪರಿಕ್ಷೆಗೆ ಬರದೇ ಇರುವ ಕಾರಣವೇಂದರೆ, ಆ ವ್ಯಕ್ತಿ ಸೋಂಕಿತ ಎಂದು ತಿಳಿದು ಬಂದಾಗ ಸಮಾಜದಲ್ಲಿ ಎಲ್ಲಾರೀತಿಯ ಕಳಂಕ ಮತ್ತು ತಾರತಮ್ಯಕ್ಕೆ ಬಲಯಾಗುವ ಕಾರಣದಿಂದಾಗಿ ಜನ ಈ ಪರೀಕ್ಷೆಗೆ ಬರುವುದು ವಿರಳ. ಅದುದರಿಂದ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಈ ರೀತಿಯ ಸೇವೆಗಳನ್ನು ಸ್ಥಾಪಿಸುವುದು ಸಾಧ್ಯವಾಗುವುದಿಲ್ಲ. ಎರಡನೆಯದಾಗಿ, ಗ್ರಾಮೀಣ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 24 ಘ 7 (ವಾರದ ಎಲ್ಲಾದಿನಗಳಲ್ಲಿ 24 ಗಂಟೆ ಕಾರ್ಯನಿರ್ವಹಿಸುವ) ಪ್ರಾಥಮಿಕ ಆರೊಗ್ಯ ಕೇಂದ್ರಗಳಲ್ಲಿ ಏಚ್.ಐ.ವಿ ಪರೀಕ್ಷೆಮಾಡುವ ವ್ಯವಸ್ಥೆ ಇದೆ.

**26. ಕಾಂಡೋಂ ಬಳಸುತ್ತಿದ್ದರೂ ಕೂಡ ಏಡ್ಸ್ ಬರುತ್ತದೆ ಎಂದು ಹೇಳುತ್ತಾರಲ್ಲಾ?**

ಮೂರು ಕಾರಣದಿಂದಾಗಿ ವ್ಯಕ್ತಿ ಈ ವೈರಾಣುವಿಗೆ ಬಲಿಯಾಗಬಹುದು. ಅವು ಯಾವವೆಂದರೆ, (1) ಸರಿಯಾದ ರೀತಿಯಲ್ಲಿ ಕಾಂಡೊಮ್ ಧರಿಸದೇ ಇರುವುದು (2) ವ್ಯಕ್ತಿಯು ಪ್ರತಿ ಲೈಂಗಿಕೆ ಸಂಪರ್ಕದಲ್ಲಿ ಕಾಂಡೊಮ್ ಬಳಸದೇ ಇದ್ದು ಕೆಲವೊಮ್ಮೆ ಮರೆತು ಅಸುರಕ್ಷಿತ ಲೈಂಗಿಕೆ ಸಂಪರ್ಕದಲ್ಲಿ ತೊಡಗುವುದರಿಂದ ಮತ್ತು (3) ಹರಿಧ ಅವಧಿ ಮೀರಿದ ಅಥವಾ ಹಾಳಾದ ಕಾಂಡೊಮ್ ಧರಿಸಿ ಲೈಂಗಿಕ ಸಂಪರ್ಕದಲ್ಲಿ ತೊಡಗುವುದರಿಂದ ಆ ವ್ಯಕ್ತಿಯು ಎಚ್ ಐ ವಿ ಸೋಂಕಿಗೆ ಒಳಗಾಗುವ ಸಾಧ್ಯತೆ ಇದೆ.

**27. ಏಡ್ಸ್ ಇರುವ ವ್ಯಕ್ತಿಗೆ ನಾಯಿ ಕಡಿದರೆ ಆ ನಾಯಿಗೆ ಸೋಂಕು ಬರುವುದೇ?**

ಎಚ್ ಐ ವಿ ವೈರಸ್ ಮನುಷ್ಯನ ದೇಹದಲ್ಲಿ ಮಾತ್ರ ಜೀವಿಸುತ್ತದೆ. ಬೇರೆ ಯಾವ ಪ್ರಾಣಿ, ಪಕ್ಷಿ, ಕೀಟ ಮತ್ತು ಇತರ ಜಂತುಗಳ ದೇಹದಲ್ಲಿ ಜೀವಸಲು ಸಾದ್ಯವಿಲ್ಲ.

**28. ಎಚ್ ಐ ವಿ ಸೋಂಕು ಇರುವವರೊಂದಿಗೆ ಲೈಂಗಿಕ ಸಂಪರ್ಕ ಇಟ್ಟು ಕೊಳ್ಳ ಬಹುದೇ?**

ಎಚ್ ಐ ವಿ ಸೋಂಕು ತಗಲುವ ಪ್ರಧಾನ ಮಾರ್ಗ ಎಂದರೆ ಅಸುರಕ್ಷಿತ ಲೈಂಗಿಕ ಸಂಪರ್ಕ. ಆದುದರಿಂದ ಎಚ್ ಐ ವಿ ಇರುವವರಾಗಲೀ ಅಥವಾ ಬೇರೆ ಅಪರಿಚಿತ ವ್ಯಕ್ತಿಗಳೊಂದಿಗೆ ಆಗಲೀ ಸುರಕ್ಷಿತ ಲೈಂಗಿಕ ಸಂಪರ್ಕ (ನಿರೋದ್ ಬಳಸಿ) ಹೊಂದುವುದು ಸೂಕ್ತ.

**29. ಎಚ್ ಐ ವಿ ಅಸುರಕ್ಷಿತ ಲೈಂಗಿಕ ಸಂಪರ್ಕ ಹೊಂದಿದ ಎಷ್ಟು ಸಮಯದ ಮೇಲೆ ಬರುತ್ತದೆ?**

ಎಚ್ ಐ ಸೋಂಕಿತ ವ್ಯಕ್ತಿಯ ದೇಹದಿಂದ ಮೇಲೆ ತಿಳಿಸಲಾಗಿರುವ ನಾಲ್ಕು ವಿಧಾನಗಳಿಂದ ನಮ್ಮ ದೇಹವನ್ನು ಪ್ರವೇಶಿಸಿದ ತಕ್ಷಣವೇ ತನ್ನ ಕೆಲಸವನ್ನು ಪ್ರಾರಂಬಿಸುತ್ತದೆ. ವೈರಸ್ಗಳ ಸಂಖ್ಯೆ ಜಾಸ್ತಿ ಆಗುತ್ತಾ ಹೋಗುತ್ತದೆ, ಅದೇ ರೀತಿ ದೇಹದಲ್ಲಿರುವ ಬಿಳಿ ರಕ್ತ ಕಣಗಳನ್ನು ಕೊಲ್ಲುವುದರೊಂದಿಗೆ ತನ್ನ ಸಂಖ್ಯೆಯನ್ನು ಹೆಚ್ಚಿಸುತ್ತದೆ. ಈ ಪ್ರಕ್ರಿಯೆಯಿಂದಾಗಿ ವೈರಸ್ ವ್ಯಕ್ತಿಯ ದೇಹವನ್ನು ಪ್ರವೇಶಿಸಿದ ಒಂದೆರಡು ದಿನದೊಳಗಾಗಿ ಆ ವ್ಯಕ್ತಿಗೆ ಜ್ವರ, ಸುಸ್ತು ಮತ್ತು ಮೈ ಕೈ ನೋವು ಕಾಣಿಸಿಕೊಳ್ಳುತ್ತದೆ.

**30. ಗುಪ್ತ ರೋಗಗಳು ಎಂದರೇನು? ಇದಕ್ಕೂ ಎಚ್ ಐ ವಿ/ ಏಡ್ಸ್ ಗೂ ಸಂಬಂದವಿದೆಯೇ?**

ಲೈಂಗಿಕ ಸಂಪರ್ಕದ ಸೋಂಕು / ಗುಪ್ತರೋಗ ಎಂದರೆ ಅಸುರಕ್ಷಿತ ಲೈಂಗಿಕ ಸಂಪರ್ಕದ ಮೂಲಕ ಹರಡುವ ಕೆಲವು ಕಾಯಿಲೆಗಳು ಮತ್ತು ಈ ರೋಗವು ವಿವಿದ ಬ್ಯಾಕ್ಟೀರಿ0ಯಾ ಮತ್ತು ವೈರಸ್‌ನಿಂದಲೂ ಉಂಟಾಗುತ್ತದೆ

ಗುಪ್ತ ರೋಗ ತಗಲಿದರೆ ಎಚ್.ಐ.ವಿಯ ಅಪಾಯಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚು. ಎಚ್.ಐ.ವಿಯೊಂದಿಗೆ ಬದುಕುತ್ತಿರುವವರಿಗೆ ಆಗಾಗ ಗುಪ್ತ ರೋಗ ತಗಲಿದರೆ ಅವರ ದೇಹದಲ್ಲಿ ವೈರಸ್ ಸಂಖ್ಯೆ ಹೆಚ್ಚಾಗುತ್ತದೆ, ಇದರಿಂದಾಗಿ ಬೇಗನೆ ಏಡ್ಸ್ ಹಂತ ತಲುಪುವ ಸಾಧ್ಯತೆ ಇದೆ.

**31. ಎ ಆರ್ ಟಿ ಚಿಕಿತ್ಸೆ ಎಚ್ ಐ ವಿ ಆದಾಗಲೋ ಅಥವಾ ಏಡ್ಸ್ ಹಂತಕ್ಕೆ ತಲುಪಿದಾಗ ತೆಗೆದುಕೊಳ್ಳಬೇಕೇ?**

ಓರ್ವ ವ್ಯಕ್ತಿಗೆ ಎಚ್ ಐ ವಿ ಸೋಂಕಿದೆ ಎಂದು ಐ ಸಿ ಟಿ ಸಿ ಪರೀಕ್ಷೆಯಲ್ಲಿ ತಿಳಿದ ತಕ್ಷಣ ಆ ವ್ಯಕ್ತಿಯು ಎ ಆರ್ ಟಿ ಕೇಂದ್ರದಲ್ಲಿ ತನ್ನ ಹೆಸರನ್ನು ನೋಂದಣೆ ಮಾಡಿಕೊಳ್ಳಬೇಕು. ಅಲ್ಲಿ ಆ ವ್ಯಕ್ತಿಯ ಸಿ ಡಿ 4 ಕಣಗಳ ಸಂಖ್ಯೆಯನ್ನು ಪರೀಕ್ಷಿಸಲಾಗುತ್ತದೆ. ಒಂದು ವೇಳೆ ಸಿ ಡಿ 4 ಕಣಗಳ ಸಂಖ್ಯೆ 250 ಕ್ಕಿಂತಲೂ (ಗರ್ಭಿಣಿಯರಲ್ಲೆ 350) ಕಡಿಮೆ ಇದ್ದಲ್ಲಿ ಆ ವ್ಯಕ್ತಿಗೆ ತಕ್ಷಣವೇ ಎ ಆರ್ ಟಿ ಚಿಕಿತ್ಸೆಯನ್ನು ಪ್ರಾರಂಬಿಸಲಾಗುವುದು. ಇಲ್ಲಿ ಆ ವ್ಯಕ್ತಿ ಎಚ್ ಐ ವಿ ಅಥವಾ ಏಡ್ಸ್ ಹಂತದಲ್ಲಿಯೂ ಇರ ಬಹುದು. ಆ

ವ್ಯಕ್ತಿಯು ಏಆರ್‌ಟಿ ಕೇಂದ್ರದ ವೈದ್ಯಾಧಿಕಾರಿಯ ಪರಿ ವೀಕ್ಷಣೆಯ ಅಧಾರದಲ್ಲಿ ಎ ಆರ್ ಟಿ ಚಿಕಿತ್ಸೆ ಬೇಕೇ ಬೇಡವೇ ಎಂಬುದನ್ನು ನಿರ್ದರಿಸಲಾಗುವುದು.

**32. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಚ್ ಐ ವಿ ಸೋಂಕಿತರು ಇದ್ದಾರೆ ಎಂದು ತಿಳಿದಲ್ಲಿ ಅವರಿಗೆ ಏನು ಸೇವೆಯನ್ನು ನೀಡ ಬಹುದಾಗಿದೆ?**

ಗ್ರಮದಲ್ಲಿ ಎಚ್ ಐ ವಿ ಸೋಂಕಿತರು ಇದ್ದಲ್ಲಿ ಅವರಿಗೆ ಮಾನಸಿಕ ಧೈರ್ಯವನ್ನು ತುಂಬ ಬೇಕು. ಅವರ ಸ್ತಿಥಿಯನ್ನು ಅವರ ಅನುಮತಿ ಪಡೆಯದೇ ಇತರರಿಗೆ ತಿಳಿಸ ಬಾರದು. ಗ್ರಾಮ ಪಂಚಾಯತಿ ಅನುದಾನವೇನಾದರೂ ಇದ್ದಲ್ಲಿ ಆ ವ್ಯಕ್ತಿಗಳಿಗೆ ಅವರಿಗೆ ಅವಶ್ಯ ಇರುವ ಸೇವೆಗಳನ್ನು ಒದಗಿಸ ಬಹುದು. ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಯ ಮೂಲಕ ಅವರಿಗೆ ಬೇಕಾದ ಅನುಕೂಲಗಳನ್ನು ಮಾಡ ಬಹುದಾಗಿದೆ.

**33. ಎಚ್ ಐ ವಿ ಸೋಂಕಿತ ವ್ಯಕ್ತಿಯು ಸಾವನ್ನಪ್ಪಿದಾಗ ವೈರಸ್ ಆ ವ್ಯಕ್ತಿಯ ದೇಹದಲ್ಲಿ ಎಷ್ಟು ಕಾಲ ಬದುಕಿರುತ್ತದೆ?**

ಮೃತ ವ್ಯಕ್ತಿಯ ದೇಹದಲ್ಲಿರುವ ದ್ರವಗಳು ಹೆಪ್ಪು ಗಟ್ಟುವ ವರೆಗೆ ಎಚ್ ಐ ವಿ ವೈರಸ್ ಕೂಡಾ ಜೀವಂತವಾಗಿರುತ್ತವೆ. ದೇಹದಲ್ಲಿರುವ ಜೀವ ಕಣಗಳು ಸತ್ತಾಗ ವೈರಸ್ ಕೂಡಾ ಸಾವನ್ನಪ್ಪುತ್ತವೆ.

**34. ಅಪಘಾತದಲ್ಲಿ ಗಾಯಾಳುವಾದ ವ್ಯಕ್ತಿಯನ್ನು ಆಸ್ಪತ್ರೆಗೆ ಸಾಗಿಸುವ ವೇಳೆ ನಮ್ಮ ಕೈಗಳಲ್ಲಿ ಸಣ್ಣ ಪುಟ್ಟ ಗಾಯಗಳಿದ್ದರೆ ನಮಗೂ ಎಚ್ ಐ ವಿ ಸೋಂಕು ಬರುವ ಅವಕಾಶವಿದೆಯೇ?**

ಎಚ್ ಐ ವಿ ಸೋಂಕಿತ ರಕ್ತವು ನಮ್ಮ ದೇಹದ ಒಳಕ್ಕೆ ಪ್ರವೇಶಿಸುವ ಸಾದ್ಯತೆ ಕೆಲವೊಮ್ಮೆ ಬರ ಬಹುದು. ಆದುದರಿಂದ ಇಂತಹ ಸಂದರ್ಭಗಳಲ್ಲಿ ಕೈಗಳಿಗೆ ಬಟ್ಟೆಯನ್ನು ಸುತ್ತಿ ಆ ವ್ಯಕ್ತಿಯ ರಕ್ತ ನಮಗೆ ತಾಗದ ರೀತಿಯಲ್ಲಿ ನಾವು ಮುನ್ನೆಚರಿಕೆ ವಹಿಸ ಬೇಕಾಗ ಬಹುದು.

**35. ಶೇವಿಂಗ್ ಸಲೂನ್ ಗಳಲ್ಲಿ ಕ್ಷೌರ ಮಾಡುವಾಗ ಎಚ್ ಐ ವಿ ಸೋಂಕು ಬರುತ್ತದೆಯೇ?**

ಸಾಮಾನ್ಯವಾಗಿ ಎಲ್ಲಾ ಕ್ಷೌರಿಕರು ಪ್ರತೀ ಕ್ಷೌರಕ್ಕೂ ಹೊಸ್ ಬ್ಲೇಡ್ ಗಳನ್ನು ಬಳಸುವುದನ್ನು ನಾವು ಕಾಣುತ್ತೇವೆ. ಅಲ್ಲದೇ ಓರ್ವ ವ್ಯಕ್ತಿಯ ಕ್ಷೌರವನ್ನು ಮಾಡಿದ ಮೇಲೆ ಅವನಿಂದ ಹಣವನ್ನು ಪಡೆದು ಇನ್ನೋರ್ವ ವ್ಯಕ್ತಿಗೆ ಕ್ಷೌರ ಶುರು ಮಾಡುವ ವೇಳೆಗೆ ವೈರಸ್ ನಾಶವಾಗಿರುತ್ತದೆ. ಆದುದರಿಂದ ಶೇವಿಂಗ್ ನಿಂದ ಎಚ್ ಐ ವಿ ಸೋಂಕು ಹರಡಿದ ಯಾವ ಉದಾಹರಣೆಗಳು ಈ ವರೆಗೆ ವರದಿಯಾಗಿಲ್ಲ.

**36. ವಿಂಡೋ ಪಿರಿಯಡ್ ಎಂದರೇನು?**

ಎಚ್.ಐ.ವಿ ವೈರಾಣು ದೇಹ ಪ್ರವೇಶಿಸಿದ ನಂತರ ರಕ್ತ ಪರೀಕ್ಷೆಯಿಂದ ಖಚಿತ ಪಡಿಸಿಕೊಳ್ಳಲು 3 ರಿಂದ 6 ತಿಂಗಳುಗಳು ಬೇಕಾಗುತ್ತದೆ. ಈ ಅವಧಿ0ಯನ್ನೇ ವಿಂಡೋ ಪಿರಿ0ಯಡ್ ಎಂದು ಕರೆ0ಯುತ್ತಾರೆ. ಈ ಅವಧಿಯಲ್ಲಿ ರಕ್ತ ಪರೀಕ್ಷೆ ಮಾಡಿ ಕೊಂಡಲ್ಲಿ ಎಚ್ ಐ ವಿ ಇರುವುಕೆಯನ್ನ ಪತ್ತೆ ಮಾಡಲಾಗುವುದಿಲ್ಲ. ಆದರೆ ವಿಂಡೋ ಪಿರಿಯಡ್ ನಲ್ಲಿ ಇರುವ ವ್ಯಕ್ತಿಯ ಮೂಲಕ ಇತರರಿಗೂ ಎಚ್ ಐ ವಿ ಸೋಂಕು ಆಗ ಬಹುದು.

**37. ಟಿ ಬಿ ಇದ್ದವರೆಲ್ಲರಿಗೂ ಎಚ್ ಐ ವಿ ಸೋಂಕು ಇರುತ್ತದೆಯೇ?**

ಟಿ ಬಿ ಇರುವವರಿಗೆಲ್ಲ ಎಚ್ ಐ ವಿ ಇರುವುದಿಲ್ಲ. ಆದರೆ ಎಚ್ ಐ ವಿ ಸೋಂಕಿತರಲ್ಲಿ ಕಂಡು ಬರುವ ಒಂದು ಸಾಮಾನ್ಯ ಅವಕಾಶವಾದಿ ಸೋಂಕು ಟಿ ಬಿ. ಆದುದರಿಂದ ಟಿ ಬಿ ಬಂದಾಗ ಸಾಮಾನ್ಯವಾಗಿ ಎಚ್ ಐ ವಿ ಪರೀಕ್ಷೆ ಮಾಡಿಸಿ ಎಚ್ ಐ ವಿ ಸೋಂಕಿಲ್ಲ ಎಂದು ಖಚಿತ ಪಡಿಸಿಕೊಳ್ಳುವುದು ಉಚಿತ.

**38. ಎಚ್ ಐ ಸೋಂಕಿತರಲ್ಲಿ ಪುರುಷರೇ ಬೇಗ ಸಾಯುತ್ತಾರಂತೆ ಹೌದೇ?**

ಸಾಮಾನ್ಯವಾಗಿ ಪುರುಷರಲ್ಲಿ ಇರುವ ಚಟಗಳು (ಧೂಮ ಪಾನ, ಕುಡಿತ, ತಂಬಾಕು ಸೇವನೆ) ಅವರ ದೇಹ ಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆ ಆದುದರಿಂದ ಅವರು  ಬೇಗನೆ ಏಡ್ಸ್ ಹಂತ ತಲುಪುವ ಸಾದ್ಯತೆಗಳಿವೆ. ಅದರಲ್ಲೂ ಪುರುಷರಿಗೆ ಎಚ್ ಐ ವಿ ಸೋಂಕಿನ ಇರುವಿಕೆ ತಿಳಿದ ನಂತರ ಅವರು ಜೀವನ ನಿರಾಶೆಯಿಂದ ದುಶ್ಚಟಗಳಿಗೆ ಬೇಗನೆ ಬಲಿಯಾಉಗುವುದನ್ನು ನಾವು ಕಾಣುತ್ತೇವೆ ಹಾಗೂ ಇದರಿಂದ ಆರೋಗ್ಯ ಸ್ಥಿತಿಯಲ್ಲಿ ಏರುಪೇರಾಗಿ ಬೇಗನೇ ಸಾವನ್ನುಪ್ಪುವರು.

**39. ಎಚ್ ಐ ವಿ ಸೋಂಕು ಮಹಿಳೆಯರಲ್ಲಿ ಹೆಚ್ಚು ಇರಲು ಕಾರಣವೇನು?**

ಒಂದನೆಯದಾಗಿ ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ವೀರ್ಯದ ಮೂಲಕ ವೈರಾಣು ಮಹಿಳೆಯರ ಜನನಾಂಗ ಮಾರ್ಗದಲ್ಲಿ ಹೆಚ್ಚು ಸಮಯ ಇರುತ್ತದೆ. ಇದಲ್ಲದೇ ಮಹಿಳೆಯರಲ್ಲಿ ಜನನೇಂದ್ರಿಯದ ಬಹುತೇಕ ಭಾಗಗಳು ದೇಹದ ಒಳ ಭಾಗದಲ್ಲಿರುವುದರಿಂದ ವೈರಾಣು ಒಂದು ವೇಳೆ ದೇಹದಲ್ಲಿ ಪ್ರವೇಶ ಪಡೆದ ನಂತರ ದೇಹದಲ್ಲಿ ಬೇಗನೇ ಹರಡುವ ಸಾದ್ಯತೆ ಹೆಚು. ಎರಡನೆಯದಾಗಿ ಸಮಾಜಲ್ಲಿ ಚಾಲ್ತಿಯಲ್ಲಿರುವ ಲಿಂಗ ಅಸಮಾನತೆ, ಮಹಿಳೆಯರ ಸಾಮಾಜಿಕ , ಕೌಟುಂಬಿಕ ಮತ್ತು ಆರ್ಥಿಕ ಸ್ಥಾನಮಾನಗಳು ಮಹಿಳೆಯರಲ್ಲಿ ಎಚ್ ಐ ವಿ ಹೆಚ್ಚು ಕಾಣಿಸಿಕೊಳ್ಳುವಲ್ಲಿ ಪರಿಣಾಮವನ್ನು ಬೀರಿದೆ.

**40. ಎಚ್ ಐ ವಿ ಸೋಂಕಿತರಿಗೆ ಪೌಷ್ಟಿಕ ಆಹಾರದ ಮಹತ್ವ ಏನು?**

ಎಚ್ ಐ ವಿ ಸೋಂಕು ಮನುಷ್ಯನ ಪ್ರತಿರೋದ ಶಕ್ತಿಯನ್ನು ಕಡಿಮೆಗೊಳಿಸಿ ಇತರ ರೋಗಾಣುಗಳು ದೇಹವನ್ನು ಪ್ರವೇಶಿಸಲು ಅವಕಾಶ ಮಾಡಿ ಕೊಡುತ್ತದೆ. ಪೌಷ್ಟಿಕ ಆಹಾರ ಸೇವನೆ ದೇಹದ ಪ್ರತಿರೋದ ಶಕ್ತಿಯನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿರುತ್ತದೆ. ತರಕಾರಿ, ಸೊಪ್ಪು, ವಿವಿದ ರೀತಿಯ ಕಾಳುಗಳು, ಹಾಲು, ಹಣ್ಣು ಹಂಪಲುಗಳ ನಿಯಮಿತ ಸೇವನೆಯಿಂದಾಗಿ ಆರೋಗ್ಯ ವೃದ್ದಿಸಿ ವೈರಾಣುಗಳು ದೇಹಕ್ಕೆ ಹಾನಿ ಮಾಡುವುದನ್ನು ತಡೆಗಟ್ಟಬಹುದು.

**41. ಗರ್ಭಿಣಿ ಮಹಿಳೆ ಹೆರಿಗೆ ನಂತರ ಮಗುವಿಗೆ ಹಾಲು ಕುಡಿಸಬಹುದಾ?**

ಖಂಡಿತ ಕುಡಿಸಬಹುದು. ಮಗುವಿನ ಆರೋಗ್ಯದಾಯಕ ಬೆಳವಣಿಗೆಗೆ ತಾಯಿಯ ಎದೆ ಹಾಲು ಅತ್ಯವಶ್ಯಕ

**42. ಸಿಡಿ 4 ಎಂದರೇನು?**

ಸಿ ಡಿ 4 ಅಂದರೆ ಕ್ಲಸ್ಟರ್ ಡಿಫ್ಲೆರೆನ್ಸಿಯೇಶನ್ ಸೆಲ್ಸ್ ಎಂದು ಕರೆಯಲ್ಪಅಡುತ್ತದೆ. ಸಿಡಿ 4 ಅನ್ನುವುದು ಒಂದು ಪ್ರಕಾರದ ಬಿಳಿ ರಕ್ತ ಕಣಗಳು.ಸಾಮಾನ್ಯವಾಗಿ ಓರ್ವ ಆರೋಗ್ಯವಂತ ವ್ಯಕ್ತಿಯಲ್ಲಿ ಈ ಸಿ ಡಿ 4 ಕಣಗಳು 600 ರಿಂದ 1200 ರ ವರೆಗೆ ಇರುತ್ತದೆ. ಈ ರಕ್ತ ಕಣಗಳು ದೇಹದ ಒಳಕ್ಕೆ ಪ್ರವೇಶಿಸುವ ವಿವಿದ ರೀತಿಯ ವರಸ್ ಮತ್ತು ಬಾಕ್ಟೀರಿಯ ಗಳಿಂದ ದೇಹವನ್ನು ರಕ್ಷಿಸುವ ಕಾರ್ಯವನ್ನು ನಿರ್ವಹಿಸುತ್ತವೆ. ಈ ಕಣಗಳ ಸಂಖ್ಯೆ ಕಡಿಮೆಯಾದಂತೆಲ್ಲ ನಮ್ಮ ದೇಹದ ರೋಗ ನಿರೋದಕ ಶಕ್ತಿಯು ಕಡಿಮೆಯಾಗುತ್ತದೆ. ಎಚ್ ಐ ವಿ ವರಸ್ ನಮ್ಮ ದೇಹವನ್ನು ಪ್ರವೇಶಿಸಿ ಸಿಡಿ 4 ರಕ್ತ ಕಣಗಳನ್ನು ನಾಶ ಮಾಡುವುದರಿಂದ ಎಚ್

ಐ ವಿ ಸೋಂಕಿತರಲ್ಲಿ ರೋಗ ಪ್ರತಿರೋಧ ಶಕ್ತಿಯು ಕಡಿಮೆಯಾಗಿ ಆ ವ್ಯಕ್ತಿ ಹಲವು ರೋಗಗಳಿಗೆ ತುತ್ತಾಗುತ್ತಾನೆ.

**43. ಎಚ್ ಐ ವಿ ಸೋಂಕಿತ ವ್ಯಕ್ತಿ ಪಾನಿ ಪುರಿ ಮಾಡುವಾಗ, ತರಕಾರಿ ಹಚ್ಚುವಾಗ ರಕ್ತ ಬಿದ್ದಲ್ಲಿ ಆ ಪಾನಿ ಪುರಿ ಅಥವಾ ಆಹಾರವನ್ನು ತಿಂದವರಿಗೆ ಎಚ್ ಐ ವಿ ಬರುವುದೇ?**

ಎಚ್ ಐ ವಿ ವೈರಸ್ ನಮಗೆ ತಿಳಿದಿರುವಂತೆ ಮನುಷ್ಯನ ದೇಹದಲ್ಲಿ ಮಾತ್ರ ಬದುಕುತ್ತದೆ. ಒಂದು ವೇಳೆ ಮನುಷ್ಯನ ದೇಹದಿಂದ ಯಾವುದೇ ದ್ರವದ ಮೂಲಕ ಹೊರಗೆ ಬಂದು ಇತರ ದ್ರವ ಯಾ ವಸ್ತುಗಳಲ್ಲಿ ಬೆರೆತಾಗ ಅದು ಬದುಕುವುದಿಲ್ಲ. ಆದುದರಿಂದ ಮೇಲೆ ಕೇಳಿರುವ ವಿಧಾನದಿಂದ ಎಚ್ ಐ ವಿ ಹರಡಿರುವ ಬಗ್ಗೆ ದಾಖಲೆಗಳು ಇಲ್ಲ.

**44. ಬ್ಲಡ್ ಬ್ಯಾಂಕನಲ್ಲಿ (ರಕ್ತ ನಿಧಿ) ಏಚ್.ಐ.ವಿ.ಮುಕ್ತ ರಕ್ತ ದೊರೆಯುತ್ತಿಲ್ಲಾ 3 ತಿಂಗಳ ಹಿಂದೆ ಸಂಗ್ರಹಗೊಂಡ ರಕ್ತದಲ್ಲಿ ಏಚ್.ಐ.ವಿ ಬರುವುದಲ್ಲವೆ?**

ಬ್ಲಡ್ ಬ್ಯಾಂಕಗಳಲ್ಲಿ ದೊರೆಯುವ ರಕ್ತವು ಏಚ್.ಐ.ವಿ, ಹೆಪಿಟೈಟಿಸ್ ಬಿ ಮತ್ತು ಇನ್ನಿತರೆ ಸೋಂಕುಗಳ ಪರೀಕ್ಷೆಯನ್ನು ಮಾಡಿದ ನಂತರ ಸೋಂಕು ರಹಿತ ರಕ್ತವನ್ನು ಮಾತ್ರ ರಕ್ತನಿಧಿ ಕೇಂದ್ರಗಳಲ್ಲಿ ಸಂಗ್ರಹಿಸಲಾಗುವುದು ಮತ್ತು ಅಗತ್ಯವಿರುವವರಿಗೆ ನೀಡಲಾಗುವುದು. ಆದುದರಿಂದ ಯಾವ ೞಸಮಯದಲ್ಲು ರಕ್ತವನ್ನು ರಕ್ತನಿಧಿ ಕೇಂದ್ರಗಳಿಂದ ಪಡೆದುಕೊಂಡಾಗ ರಕ್ತ ಪಡೆದ ವ್ಯಕ್ತಿಗೆ ಏಚ್.ಐ.ವಿ ಸೋಂಕು ಬರುವುೞದಿಲ್ಲ.

**45. ಗ್ರಾಮ ಪಂಚಾಯಿತಿ ಏಚ್.ಐ.ವಿ ಬಗ್ಗೆಯಾವ ರೀತಿ ಮಾಹಿತಿಯನ್ನು ನೀಡಬಹುದು?**

ಪ್ರತೀ ಗ್ರಾಮಪಂಚಾಯಿತಿಯು ಅವರ ಗ್ರಾಮವನ್ನು ಏಚ್.ಐ.ವಿ ಮುಕ್ತ ಗ್ರಾಮವನ್ನಾಗಿಸಲು, ಗ್ರಾಮದ ಯುವ ೞಸಮುದಾಯವನ್ನು ಏಚ್.ಐ.ವಿ ಸೋಂಕಿನಿಂದ ರಕ್ಷಿಸುವುದು, ಗ್ರಾಮದಲ್ಲಿ ಒಂದುವೇಳೆ ಏಚ್.ಐ.ವಿ ಸೋಂಕಿತ ವ್ಯಕ್ತಿ ಇರುವುದು ತಿಳಿದು ಬಂದಲ್ಲಿ ಆ ವ್ಯಕ್ತಿಯನ್ನು ಮತ್ತು ವ್ಯಕ್ತಿಯ ಕುಟುಂಬವನ್ನು ಗ್ರಾಮದಲ್ಲಿ ಕಂಡು ಬೞರುವ ಕಳಂಕ ಮತ್ತು ತಾರತಮ್ಯದಿಂದ ರಕ್ಷಿಸುವುದು ಮತ್ತು ಗ್ರಾಮದ ಜನರಲ್ಲಿ ಏಚ್.ಐ.ವಿ ಹಾಗು ಏಡ್ಸ್ ಬಗ್ಗೆ ಜಾಗೃತಿ ಮೂಡಿಸುವ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವುದು, ಇತ್ಯಾದಿ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯಿತಿ ಕೈಗೆತ್ತಿಕೊಳ್ಳಬಹುದು.

**46. ರಕ್ತದಾನ ಶಿಭಿರದಲ್ಲಿ ರಕ್ತ ಪರೀಕ್ಷೆ ಮಾಡದೇ ರಕ್ತ ಪಡೆಯುತ್ತಾರೆ. ಇದನ್ನು ಸ್ಥಳದಲ್ಲಿಯೇ ಪರೀಕ್ಷಿಸಲು ಸಾಧ್ಯವಿಲ್ಲವೆ?**

ರಕ್ತದಾನ ಶಿಭಿರಗಳಲ್ಲಿ ಸಂಗ್ರಹಿಸಿದ ರಕ್ತವನ್ನು, ಎಂತಹ ತುರ್ತು ಪರಸ್ಥಿಇದ್ದರೂ ಬೇರೆಯವರಿಗೆ ಆ ರಕ್ತವನ್ನು ಅದೇ ಸ್ಥಳದಲ್ಲಿ ನೀಡಲಾಗುವುದಿಲ್ಲಾ. ಯಾಕೆಂದರೇ, ರಕ್ತವನ್ನು ಕೊಡುವ ವ್ಯಕ್ತಿಯ ಜೀವನ ಶೈಲಿ ಮತ್ತು ಲೈಂಗಿಕ ವರ್ತನೆಯ ಬಗ್ಗೆಮಾಹಿತಿ ಇರುವದಿಲ್ಲಾ. ಅದ್ದರಿಂದ ರಕ್ತದಾನ ಶಿಭಿರಗಳಲ್ಲಿ ಸಂಗ್ರಹಿಸಿದ ರಕ್ತವನ್ನು ಎಲ್ಲಾ ರೀತಿಯೞ ಪರೀಕ್ಷೆಗಳನ್ನು ಮಾಡಿ ಆ ರಕ್ತವು ಏಚ್.ಐ.ವಿ ಮುಕ್ತವೆಂದು ಖಚಿತವಾದಾಗ ಮಾತ್ರ ಬೇರೆಯವರಿಗೆ ಈ ರಕ್ತವನ್ನು ನೀಡಲಾಗುವುದು.

**47. ಏಚ್.ಐ.ವಿ ಪರೀಕ್ಷೆಗಾಗಿ ಜನರನ್ನು ಆಸ್ಪತ್ರೆಗೆ ಕರೆದುಕೊಂಡು ಹೊಗುತ್ತಾರೆ. ಕೊನೆಗೆ ಸೊಂಕಿರುವ ಮಾಹಿತಿ ತಿಳಿದು ಅವರನ್ನು ಬಿಟ್ಟು ಹೋಗುತ್ತಾರೆ. ಇವರಿಗೆ ಹೇಗೆ ತಿಳುವಳಿಕೆ ನೀಡಬಹುದು?**

ಕೆಲವೊಮ್ಮೆ ಈ ತರಹ ಆಗುವುದುಂಟು. ಅದಕ್ಕೆ ಪರೀಕ್ಷೆಗೆ ಹೋಗುವ ವ್ಯಕ್ತಿ ತನ್ನ ನಂಬಿಕೆಯ ಸಂಗಡಿಗರನ್ನು ಮಾತ್ರ ಜೊತೆಯಲ್ಲಿ ಕರೆದುಕೊಂಡು ಹೋಗ ಬೇಕಾಗುತ್ತದೆ. ಅಂತೆಯೇ ಜೊತೆಗೆ ಹೋದ ವ್ಯಕ್ತಿ ಏಚ್.ಐ.ವಿ ಸೊಂಕಿತ

ವ್ಯಕ್ತಿಗೆ ತಿಳಿಹೇಳುವ ಪ್ರಯತ್ನ ಮಾಡುವುದು ಸರಿ'ಯಲ್ಲ. ಈ ರೀತಿಯ ಪ್ರಯತ್ನದಿಂದ ಸೋಂಕಿತ ವ್ಯಕ್ತಿಗೆ ಮತ್ತು ಆ ಕುಟುಂಬಕ್ಕೆ ಇನ್ನೂ ಸಮಸ್ಸೆಯಾಗುವ ಸಾಧ್ಯತೆಗಳು ಅತಿಹೆಚ್ಚಾಗಿರುತ್ತವೆ. ಆದ್ದುದರಿಂದ ಜಿಲ್ಲಾ ಅಸ್ಪತ್ರೆಗಳಲ್ಲಿರುವ ಆಪ್ತ ಸಲಹೆ ಕೇಂದ್ರಗಳಲ್ಲಿ ವಿಶೇಷವಾಗಿ ತರಬೇತಿ ಪಡೆದ ಆಪ್ತ-ಸಮಾಲೋಚಕರು ಈ ಕಾರ್ಯವನ್ನು ಸೊಂಕಿತ ವ್ಯಕ್ತಿಗೆ ಮತ್ತು ಕುಟುಂಬದ ಸದಸ್ಯರಿಗೆ ಸರಿಯಾದ ರೀತಿಯಲ್ಲಿ ಸಲಹೆ-ಸೂಚನೆಗಳನ್ನು ನೀಡುತ್ತಾರೆ.

**48. ಏಚ್.ಐ.ವಿ ಸೋಂಕಿತ ಮಗು ಬೆಳವಣಿಗೆಯಾದ 'ಹಾಗೆ ಏಚ್.ಐ.ವಿ ಸೋಂಕಿನ ಪ್ರಮಾಣ ಹೆಚ್ಚಾಗುತ್ತದೆಯೇ? ಅಥವಾ ಇದ್ದಷ್ಟು ಮಾತ್ರದಲ್ಲಿ ಇರುತ್ತದೆಯೇ? ಇದಕ್ಕೆ ಬೇರೆ ಔಷಧಿ ಇಲ್ಲವೇ?**

ಏಚ್.ಐ.ವಿ ಮಾನವ ಶರೀರದಲ್ಲಿ ವಯಸ್ಸಿನ ಆಧಾರದ ಮೇರೆಗೆ ಹೆಚ್ಚು ಅಥವಾ ಕಡಿಮೆಯಾಗುವುದಿಲ್ಲಾ. ವೈರಾಣುವಿವ ಸಂಖೆಯು ಕ್ಷಣ-ಕ್ಷಣ ಹೆಚ್ಚುತ್ತಾ ಇರುತ್ತದೆ. .ವೈರಾಣುವಿನ ಸಂಖೆಯನ್ನು ನಿಯಂತ್ರಿಸಲು ಏ.ಅರ್.ಟಿ ಔಷಧಿ ಉಪಲಬ್ಧವಿದೆ. ಈ ಔಷಧಿಯನ್ನು ವೈದ್ಯರ ಸಲಹೆಯಂತೆ  ನಿಯಮಿತವಾಗಿ ಸೇವಿಸಿದಾಗ ಏಚ್.ಐ.ವಿ. ವೈರಾಣುವಿನ ಸಂಖೆ ಹೆಚ್ಚಾಗುವದಿಲ್ಲ ಮತ್ತು ಶರೀರದಲ್ಲಿರುವ ಬಿಳಿ ರಕ್ತ ಕರಣಗಳ ಸಂಖೆ ಕಡಿಮೆಯಾಗುವುದಿಲ್ಲ. ಪೌಷ್ಟಿಕ ಆಹಾರದ ಸೇವನೆಯಿಂದಲೂ ವೈರಸ್ ನ ಪ್ರಮಾಣವನ್ನು ನಿಯಂತ್ರಿಸ ಬಹುದಾಗಿದೆ

**49. ಏಡ್ಸ್ ಇದ್ದವರನ್ನು ಅಸ್ಪೃಶ್ಯರ ಹಾಗೆ ನೋಡುತ್ತಾರೆ ಯಾಕೆ? ಇವರಿಗೆ ಅರಿವು ಮೂಡಿಸುವ ಬಗೆ ಹೇಗೆ?**

ಏಚ್.ಐ.ವಿ ಸೋಂಕಿತ ವ್ಯಕ್ತಿಗಳನ್ನು ಸಮಾಜವು ಅಸ್ಪೃಶ್ಯರಂತೆ ಕಾಣಲು ಕಾರಣವೇನೆಂದರೆ ಜಗತ್ತಿನ ಅತಿ ಹೆಚ್ಚು ರಾಷ್ಟ್ರಗಳಲ್ಲಿ ಏಚ್.ಐ.ವಿ.ಯು ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಹರಡುತ್ತಿದೆ. ನಮ್ಮ ದೇಶದ ಸಂಸ್ಕೃತಿವು ಜೀವನ ಸಂಗಾತಿಯಲ್ಲದ ವ್ಯಕ್ತಿಯೊಡನೆ ಲೈಂಗಿಕ ಸಂಪರ್ಕ ಬೆಳೆಸುವುದು ವ್ಯಭಿಚಾರ ಎಂದು ಪರಿಗಣಿ'ಸಲಾಗುವುದು ಮತ್ತು ಇಂತಹ ವ್ಯಕ್ತಿಗಳಿಗೆ ಸಮಾಜವು ಕೀಳು ದೃಷ್ಟಿಯಿಂದ ಕಾಣಲಾಗುವುದು. ಆದುದರಿಂದ ಏಚ್.ಐ.ವಿ ಸೊಂಕಿತ ವ್ಯಕಿ ತ್ಎಂದು ತಿಳಿದುಬಂದಾಗ ಆ ವ್ಯಕ್ತಿಯ ಚಾರಿತ್ರ್ಯವನ್ನು ಪ್ರಶ್ನಿಸಲಾಗುವುದು. ಈ ಕಾರಣದಿಂದಾಗಿ ಸಮಾ'ಜದಲ್ಲಿ ಸೋಂಕಿತರನ್ನು ಕಳಂಕ ಮತ್ತು ತಾರತಮ್ಯದಿಂದ ಕಾಣಲಾಗುವುದು.

ಸಮಾಜದಲ್ಲಿರುವ ಕಳಂಕ-ತಾರತಮ್ಯವನ್ನು ಕಡಿಮೆಗೊಳಿಸಲು ಸರಳವಾದ ಮತ್ತು ಪರಿಣಾಮಕಾರಿಯಾದ ಒಂದೇ-ಒಂದು ಕಾರ್ಯ ವಿವಿಧ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಜಾಗೃತಿ/ಅರಿವು ಮೂಡಿಸುವುದು ಆಗಿದೆ.

**50. ಎಚ್ ಐ ವಿ ತಡೆಗೆ ಇರುವ ಸೇವೆಗಳು ಯಾವುವು?**

ಎಚ್ ಐ ವಿ ತಡೆಗೆ ಹೆಚ್ಚಿನ ಸೇವೆಗಳು ಸರಕಾರೀ ಆಸ್ಪತ್ರೆಗಳಲ್ಲಿ ಲಭ್ಯವಿದೆ. ಪ್ರಸ್ತುತ ಇರುವ ಮುಖ್ಯವಾದ ಸೇವೆಗಳು ಯಾವುವೆಂದರೆ

- ಐ ಸಿ ಟಿ ಸಿ ಕೇಂದ್ರಗಳು – ಸಮಗ್ರ ಆಪ್ತಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರ
- ಪಿ.ಪಿ.ಟಿ.ಸಿ.ಟಿ ಕೇಂದ್ರಗಳು – ಹೆತ್ತವರಿಂದ ಮಗುವಿಗೆ ಸೋಂಕು ಹರಡದಂತೆ ತಡೆಯುವ ಕೇಂದ್ರಗಳು
- ಏ.ಆರ್.ಟಿ ಕೇಂದ್ರಗಳು – ಎಚ್ ಐ ಸೋಂಕು ತಗುಲಿದ ವ್ಯಕ್ತಿಗಳಿಗೆ ಚಿಕಿತ್ಸೆ ಯನ್ನು ಒದಗಿಸುವ ಕೇಂದ್ರಗಳು
- ಟಿ.ಬಿ – ಕ್ಷಯರೋಗ (ಡಾಟ್ಸ್) ಚಿಕಿತ್ಸಾ ಕೇಂದ್ರಗಳು
- ಎಸ್.ಟಿ.ಐ ಚಿಕಿತ್ಸಾ ಕೇಂದ್ರಗಳು – ಲೈಂಗಿಕ ಸಂಪರ್ಕ ಸೋಂಕುಗಳಿಗೆ ಚಿಕಿತ್ಸೆ ನೀಡುವ ಕೇಂದ್ರಗಳು
- ಡಿ.ಎಲ್.ಎನ್ ಕೇಂದ್ರಗಳು– ಜಿಲ್ಲಾ ಮಟ್ಟದ ಎಚ್.ಐ.ವಿ ಸೋಂಕಿತರ ಒಕ್ಕೂಟಗಳು

ಎಚ್ ಐ ವಿ ಆಡ್ಸ್ ಗೆ ಸಂಬಂದ ಪಟ್ಟ ಎಲ್ಲಾ ಪ್ರಶ್ನೆಗಳಿಗೆ, ಮಾಹಿತಿಗಳಿಗೆ ಆಯಾ ಜಿಲ್ಲೆಯಲ್ಲಿರುವ ಜಿಲ್ಲಾ ಏಡ್ಸ್ ನಿಯಂತ್ರಣ ಘಟಕಕ್ಕೆ ಭೇಟಿ ನೀಡಿ ಅಥವ ದೂರವಾಣಿ ಮೂಲಕ ಪಡೆದು ಕೊಳ್ಳಬಹುದಾಗಿದೆ.